ತೆಗೆದುಕೊಂಡು ಒಂದು ನೋಟ್ ಬುಕ್ಕನ್ನು ತೆರೆದು ತಿರುವಿ ಹಾಕಿದ. 'ಹಿಂದಿನ ಬಾಕಿ ನಿನ್ನದು ಇಪ್ಪತ್ತು ರೂಪಾಯಿ ಇದೆ. ಇದು ಅದಕ್ಕೆ ಸರಿ ಆಯ್ತು. ಈಗ ಗುಳಿಗೆ ಬೇಕಾದರೆ ಬೇರೆ ಹಣ ಕೊಡು' ಎಂದ. ಅಜ್ಜಿ 'ನನ್ನಲ್ಲಿ ಬೇರೆ ಹಣ ಇಲ್ಲ. ಗುಳಿಗೆ ಖರ್ಚಾಗಿದೆ. ಆಮೇಲೆ ಹಣ ತಂದು ಕೊಡುತ್ತೇನೆ' ಎಂದಳು. 'ಅದೆಲ್ಲ ಆಗುವುದಿಲ್ಲ. ಮೊದಲು ಹಣ ಕೊಡು. ಕೊಟ್ಟರೆ ಮಾತ್ರ ಗುಳಿಗೆ ಕೊಡುತ್ತೇನೆ' ಎಂದು ಬಿಟ್ಟ ಅಂಗಡಿಯವ. 'ನಿನಗೆ ವಯಸ್ಸಾಗಿದೆ ಆದರೂ ಹಾಗೆ ಹೇಳುತ್ತಿಯಲ್ಲ... ನಿನ್ನ ಮಗ ಇದ್ದರೆ ಕೊಡುತ್ತಿದ್ದ' ಎಂದಳು ಅಜ್ಜಿ. 'ಅವರಿಗೆಲ್ಲ ವ್ಯವಹಾರಿಕ ಜ್ಞಾನ ಇಲ್ಲ. ಹಣ ಕೊಡು ಇಲ್ಲದೇ ಇದ್ದರೆ ಹೋಗು' ಎನ್ನುತ್ತಿದ್ದಂತೆ ಪುಟ್ಟಿ ತನ್ನ ನೋಟನ್ನು ನಿಧಾನವಾಗಿ ಅಜ್ಜಿಯ ಕೈಗೆ ಕೊಡತೊಡಗಿದಳು. ಅಜ್ಜಿ 'ಬೇಡ ಮಗ ಬೇಡ, ನೀನು ತಿಂಡಿ ತಿನ್ನು' ಎಂದರೂ ಪುಟ್ಟಿ 'ನೀನು ಗುಳಿಗೆ ತಗೊ' ಎನ್ನುತ್ತ ಅಜ್ಜಿಯ ಕೈಯಲ್ಲಿ ನೋಟನ್ನು ಹಿಡಿಸಿಬಿಟ್ಟಳು. ಅಜ್ಜಿ ಈಗ ಇಪ್ಪತ್ತು ರೂಪಾಯಿ ಕೊಟ್ಟು ಗುಳಿಗೆ ತೆಗೆದುಕೊಂಡಳು. ಅವಳ ಕಣ್ಣು ತುಂಬಿ ಬಂದಿತ್ತು. ಈಗ ಅಜ್ಜಿಯ ಸಿಹಿ ಮುತ್ತಿನಲ್ಲಿ ಪುಟ್ಟಿಯ ಹೊಟ್ಟೆ ತುಂಬಿ ಹೋಯಿತು.

●

